# ಆಹಾ ಸುದ್ದಿ!

★ ಸಸಿತೋಟ



ಇದು ಚೀನಾದ ಸಂಗೀತ ತಂಡ ಹೌಲ್ ಡೌಸ್. ಸದಸ್ಯರು ಬಿಗಿದ ಹಗ್ಗದ ಮೇಲೆ ವಾದ್ಯ ನುಡಿಸುವ ತರಬೇತಿ ಪಡೆಯುತ್ತಿದ್ದಾರೆ. ಹಗ್ಗದ ಮೇಲಿನ ನಡಿಗೆ ಅಲ್ಲಿಯ ಜನಸಾಮಾನ್ಯರಿಗೆ ನಿತ್ಯದ ಬದುಕಿನಲ್ಲೂ ಸಾಮಾನ್ಯ ಎಂದು ಈ ರೀತಿ ತೋರಿಸಬಾರದಿತ್ತು.

ವಿಶ್ವದ ಹಲವು ಕಡೆ ಅವಿವಾಹಿತ ಪುರುಷರ ಸಂಖ್ಯೆ ಜಾಸ್ತಿ ಇದೆಯಂತೆ. ಇದಕ್ಕೆ ಕಾರಣ ಮಹಿಳೆಯರ ಸಂಖ್ಯೆ ಕಡಿಮೆ ಇರುವುದು. ಆದರೆ ಬ್ರೆಜಿಲ್‌ನ ನೊವಿಯಾದಲ್ಲಿ ಮಾತ್ರ ಅವಿವಾಹಿತ ಯುವತಿಯರ ಸಂಖ್ಯೆ ಜಾಸ್ತಿ ಇದೆಯಂತೆ. ಈ ಯುವತಿಯರು ಕೃಷಿಯಿಂದ ಹಿಡಿದು ಎಲ್ಲಾ ಕೆಲಸವನ್ನೂ ಮಾಡುತ್ತಾರಂತೆ. ಷರತ್ತೆಂದರೆ ಮದುವೆಯಾಗುವ ಹುಡುಗ ಮನೆ ಅಳಿಯನಾಗಬೇಕಂತೆ. ಮದುವೆ ಯೋಗ, ವಿದೇಶ ವಾಸ್ತವ್ಯ ಯೋಗ ಎರಡೂ ಒಟ್ಟಿಗೇ ಲಭ್ಯ. ಯಾಕೆ ಯತ್ನಿಸಬಾರದು!

ಮಾನಸಿಕ ಒತ್ತಡ, ಆತಂಕದಿಂದ ಬಳಲುವವರಿಗೆ ಸ್ಪೇನ್‌ನಲ್ಲಿ ಹೊಸ ಚಿಕಿತ್ಸಾ ಪದ್ಧತಿ ಬಂದಿದೆ. ಕುದುರೆಯ ಮೇಲೆ ಮಲಗಿ, ಅದರ ಜೊತೆ ಓಡಾಡಿ, ಅದರ ಕಿವಿಯಲ್ಲಿ ಪಿಸುಮಾತು ಉದುರಿಸಿ... ಸಮಾಧಾನ ಹೊಂದುತ್ತಾರಂತೆ. ಮನುಷ್ಯರಿಗಿಂತ ಪ್ರಾಣಿಗಳೇ ಎಷ್ಟೋ ವಾಸಿ. ತುಟಿ ಪಿಟಕ್ ಎನ್ನದೇ ಸುಖ– ದುಃಖ ಕೇಳಿಸಿಕೊಳ್ಳುತ್ತವೆ ಅಲ್ಲವೇ?



ಭಾರತದಲ್ಲಿ ಮದುವೆ ಸಂದರ್ಭದಲ್ಲಿ ವರ ಕರೆನ್ಸಿ ನೋಟುಗಳ ಹಾರ ಧರಿಸಿರುವುದನ್ನು ನೋಡಿರಬಹುದು. ಆದರೆ ಚೀನಾದಲ್ಲಿ ಈ ನೋಟುಗಳ ಗುಚ್ಛವನ್ನು ಯುವಕನೊಬ್ಬ ತನ್ನ ಪ್ರೇಯಸಿಗೆ ನೀಡಿರುವುದು ಸುದ್ದಿ ಮಾಡಿದೆ. 330,000 ಯುವಾನ್ (ಸುಮಾರು 35,70,000 ರೂಪಾಯಿ) ನೋಟುಗಳಿರುವ ಈ ಗುಚ್ಛವನ್ನು ನೀಡಿದ ಯುವಕ ಪ್ರೇಮ– ಪ್ರೀತಿಯಲ್ಲೇ ಮುಳುಗಿದ್ದಾನೋ ಅಥವಾ ಅಲ್ಲಿಯ ಕಾನೂನು ಸಮಸ್ಯೆಯಲ್ಲಿ ಮುಳುಗಿದ್ದಾನೋ ಸದ್ಯಕ್ಕೆ ಗೊತ್ತಾಗಿಲ್ಲ.





ಅಮೆರಿಕದ ಮಾಜಿ ಅಧ್ಯಕ್ಷ ಒಬಾಮ ಅವರ ಪತ್ನಿ ಮಿಶೆಲ್ ತಮ್ಮ ಮದುವೆ ದಿನದ ಚಿತ್ರವನ್ನು ಇನ್‌ಸ್ಟಾಗ್ರಾಮಿನಲ್ಲಿ ಹಾಕಿದ್ದು ಅದು ವೈರಲ್ ಆಗಿದೆ. ಒಬಾಮ ದಂಪತಿ ಬದುಕಿನ ಖುಷಿಯನ್ನು ಹಿಡಿದಿಟ್ಟಿರುವ ಬಗೆಯಿದು. ಆದರೆ ಮಾಜಿ ಆದರೂ ರಾಜಕೀಯ ಬಿಡದ ಭಾರತದ ರಾಜಕಾರಣಿಗಳಿಗೆ ಬಹುಶಃ ಇಂತಹ ಖುಷಿಯೂ ಮಾಜಿ ಆಗಿರಬಹುದು.

ಇಟಲಿಯಲ್ಲಿ ದಂಪತಿ ತಮ್ಮ ಮಗುವಿಗೆ ಇಟ್ಟ ಹೆಸರು ಈಗ ಕೋರ್ಟ್ ಮೆಟ್ಟಲೇರಿದೆ. ಆ ದಂಪತಿ ಹೆಣ್ಣುಮಗುವಿಗೆ ಬ್ಲೂ ಎಂದು ಹೆಸರಿಟ್ಟಿದ್ದು, ಇದು ಹೆಣ್ಣು ಮಕ್ಕಳಿಗೆ ಇಡುವ ಹೆಸರಲ್ಲ, ಇದನ್ನು ಬದಲಿಸದಿದ್ದರೆ ತಾನೇ ಹೊಸ ಹೆಸರು ಇಡುವುದಾಗಿ ಕೋರ್ಟ್ ಹೇಳಿದೆಯಂತೆ. ನಮ್ಮಲ್ಲೇ ವಾಸಿ, ಹೆಸರಿಗಾಗಿ ಬಡಿದಾಡಲು ಸಮಯವಿಲ್ಲ ಅಲ್ಲವೇ!